KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 19/09/20..

**ಇ-ಬ್ಯಾನ್** ಜನರ ಆರೋಗ್ಯದ ಮೇಲೆ ಅತೀವ ದುಷ್ಪರಿಣಾಮ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಕ್ರಮ

# ಇ-ಸಿಗರೆಟ್ ದೇಶಾದ್ಯಂತ ನಿಷೇಧ!

ಕ.ಪ್ರ 19/9/19

## ಇ-ಸಿಗರೆಟ್ ಉತ್ಪಾದನೆ, ಮಾರಾಟ, ಆಮದು ನಿಷೇಧಕ್ಕೆ ಕೇಂದ್ರ ಸಂಪುಟ ನಿರ್ಧಾರ

**ನವದೆಹಲಿ:** ಯುವ ಸಮೂಹ ಹೆಚ್ಚಾಗಿ ಬಳಸುತ್ತಿರುವ ಎಲೆಕ್ಟ್ರಾನಿಕ್ (ಇ) - ಸಿಗರೆಟ್‌ಗಳ ಉತ್ಪಾದನೆ, ಆಮದು, ಮಾರಾಟ ನಿಷೇಧಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಕುರಿತು ಸುಗ್ರೀವಾಜ್ಞೆ ಹೊರಡಿಸುವ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಸರ್ಕಾರದ ಈ ನಿರ್ಧಾರದಿಂದಾಗಿ ದೇಶಾದ್ಯಂತ ಒಟ್ಟಾರೆ 150 ಸ್ವಾದವನ್ನೊಳಗೊಂಡ 400 ಬ್ರ್ಯಾಂಡ್‌ಗಳ ಇ-ಸಿಗರೆಟ್ ಪೂರೈಕೆ ಮಾಡುತ್ತಿದ್ದ ಉದ್ಯಮ ಸ್ತಬ್ಧವಾಗಲಿದೆ.

ಸಂಪುಟ ಸಭೆ ಬಳಿಕ ಈ ಕುರಿತು ಮಾಹಿತಿ ನೀಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಇ- ಸಿಗರೆಟ್ ಮತ್ತು ಅದೇ ರೀತಿಯ ಇತರೆ ಉತ್ಪನ್ನಗಳು ಜನರ ಅದರಲ್ಲೂ ಯುವ ಸಮುದಾಯದವರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿರುವ ಹಿನ್ನೆಲೆಯಲ್ಲಿ, ಅವುಗಳನ್ನು ನಿಷೇಧಿಸಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದರು.

» 7

**11** ಕೋಟಿ

**400** ಬ್ರ್ಯಾಂಡ್

**150**



### 15 ರಾಜ್ಯಗಳಲ್ಲಿ ಈಗಾಗಲೇ ನಿಷೇಧ

ಕೇಂದ್ರ ಸರ್ಕಾರ ನಿಷೇಧ ಹೇರುವುದಕ್ಕೆ ಮುನ್ನವೇ ಕರ್ನಾಟಕ ಸೇರಿದಂತೆ ದೇಶದ 15 ರಾಜ್ಯಗಳಲ್ಲಿ ಇ ಸಿಗರೆಟ್ ಬಳಕೆಗೆ ನಿಷೇಧ ಹೇರಲಾಗಿದೆ.

### ಏನೇನು ನಿಷೇಧ?

- ಇ-ಸಿಗರೆಟ್
- ಇ-ಸಿಗರೆಟ್ ರೀತಿಯ ಸಾಧನ
- ವೇಪ್
- ಇ-ಶೀಷಾ
- ಇ-ನಿಕೋಟಿನ್ ಸ್ವಾದ ಸೂಸುವ ಹುಕ್ಕಾ

### ಏನು ದಂಡ?

- ಮೊದಲ ಸಲ 1 ವರ್ಷ ಜೈಲು, ₹1 ಲಕ್ಷ ದಂಡ
- ನಂತರ ಪ್ರತಿ ಬಾರಿ 3 ವರ್ಷ ಜೈಲು, 5 ಲಕ್ಷ ದಂಡ
- ಇ-ಸಿಗರೆಟ್ ಸಂಗ್ರಹಕ್ಕೆ ಆರು ತಿಂಗಳು ಜೈಲು, ₹50000 ದಂಡ

# ಇ-ಸಿಗರೆಟ್ ದೇಶಾದ್ಯಂತ ನಿಷೇಧ

» ಮೊದಲ ಪುಟದಿಂದ ಕ.ಪ್ರ 19/9/19

ಒಂದು ವೇಳೆ ಇ - ಸಿಗರೆಟ್‌ಗಳ ಉತ್ಪಾದನೆ, ಆಮದು, ಮಾರಾಟ, ಮತ್ತು ಜಾಹೀರಾತು ಮಾಡಿದಲ್ಲಿ, ಮೊದಲ ಸಲದ ಅಪರಾಧಕ್ಕೆ 1 ವರ್ಷದವರೆಗೆ ಜೈಲು ಮತ್ತು 1 ಲಕ್ಷ ರು. ದಂಡ ವಿಧಿಸಲಾಗುವುದು. ನಂತರದ ಪ್ರತಿ ಸಲದ ಅಪರಾಧಕ್ಕೂ 3 ವರ್ಷದವರೆಗೆ ಜೈಲು ಮತ್ತು 5 ಲಕ್ಷ ರು.ವರೆಗೆ ದಂಡದ ಪ್ರಮಾಣ ಹೆಚ್ಚಳವಾಗುತ್ತಾ ಹೋಗಲಿದೆ. ಒಂದು ವೇಳೆ ಇಂಥ ವಸ್ತುಗಳನ್ನು ಸಂಗ್ರಹಿಸಿ ಇಟ್ಟರೆ ಅದಕ್ಕೆ 6 ತಿಂಗಳು ಜೈಲು ಮತ್ತು 50000 ರು. ದಂಡ ವಿಧಿಸಲಾಗುವುದು ಎಂದು ನಿರ್ಮಲಾ ತಿಳಿಸಿದರು.

**ನಿಷೇಧಕ್ಕೆ ಕಾರಣ:** ಈ ಬಗ್ಗೆ ಬುಧವಾರ ಮಾತನಾಡಿದ ಸಚಿವೆ ನಿರ್ಮಲಾ ಅವರು, ಧೂಮಪಾನಕ್ಕೆ ಚಟಕ್ಕೆ ತುತ್ತಾದ ಯುವಕರನ್ನು ಇದರಿಂದ ಹೊರತರುವ ಸಲುವಾಗಿ ಇ-ಸಿಗರೆಟ್ ಜಾರಿಗೆ ಬಂದಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಯುವ ಜನಾಂಗ ಇ-ಸಿಗರೆಟ್ ದಾಸರಾಗಿದ್ದಾರೆ ಎಂದು ವರದಿಗಳು ಹೇಳುತ್ತಿವೆ. ಇದೇ ಕಾರಣಕ್ಕಾಗಿ ಈ ಕ್ರಮಕ್ಕೆ ನಿರ್ಧರಿಸಲಾಗಿದೆ. ಜೊತೆಗೆ, ಇ-ಸಿಗರೆಟ್ ಯುವ ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

ಇಂಥ ಉತ್ಪನ್ನಗಳ ಸಂಗ್ರಹ ಹೊಂದಿರುವವರು ಸುಗ್ರೀವಾಜ್ಞೆ ಹೊರಬಿದ್ದ ಕೂಡಲೇ ತಮ್ಮ ಬಳಿ ಇರುವ ಉತ್ಪನ್ನಗಳನ್ನು ಘೋಷಣೆ ಮಾಡಿ, ಅದನ್ನು ಸಮೀಪದ ಪೊಲೀಸ್ ಠಾಣೆಗೆ ಸಲ್ಲಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

**ಉದ್ಯಮ ವಲಯಗಳ ಆಕ್ಷೇಪ:** ಇ-ಸಿಗರೆಟ್ ಮಾರಾಟದ ಮೇಲೆ ನಿಷೇಧ ಹೇರಲು ಮುಂದಾದ ಕೇಂದ್ರ ಸರ್ಕಾರದ ಕ್ರಮಕ್ಕೆ ಇ-ಸಿಗರೆಟ್ ಮಾರಾಟಗಾರರ ಸಂಘಟನೆಗಳು, ಬಳಕೆದಾರರು ಹಾಗೂ ಇತರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಿಗರೆಟ್ ಉದ್ಯಮವನ್ನು ರಕ್ಷಣೆ ಮಾಡುವ ಸಲುವಾಗಿ ಇ-ಸಿಗರೆಟ್ ಮಾರಾಟದ ಮೇಲೆ ನಿಷೇಧ ಹೇರುವ ಕಠಿಣ ನಿರ್ಣಯಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ಈ ಮೂಲಕ ಸಿಗರೆಟ್‌ಗೆ ಪರ್ಯಾಯ ಹಾಗೂ ಸುರಕ್ಷಿತವಾದ ಇ-ಸಿಗರೆಟ್ ಯುವಕರ ಕೈಗೆ ಸಿಗದಂತೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಇನ್ನು ಈ ಬಗ್ಗೆ ಪ್ರತಿಕ್ರಿಸಿಯಿದ ಎವಿಐ ಸಂಘಟನೆ ನಿರ್ದೇಶಕ ಸಾಮ್ರಾಟ್ ಚೌಧರಿ, 'ಕೇಂದ್ರ ಸರ್ಕಾರದ ಈ ಕ್ರಮ ಜನರ ಜೀವನವನ್ನು ಅಪಾಯಕ್ಕೆ ಸಿಲುಕಿಸಲಿದೆ. ಅಲ್ಲದೆ, ಈ ನಿರ್ಧಾರವು ಸಾರ್ವಜನಿಕರ ರಕ್ಷಣೆಗಿಂತ ಸಿಗರೆಟ್ ಉದ್ಯಮವನ್ನು ರಕ್ಷಣೆ ಮಾಡುವುದೇ ಸರ್ಕಾರದ ಉದ್ದೇಶವೆಂಬಂತೆ ಭಾಸವಾಗುತ್ತಿದೆ. ಆದರೆ, ನಾವು ಕೇಂದ್ರದ ಈ ಕ್ರಮದ ವಿರುದ್ಧ ಹಾಗೂ ಇ-ಸಿಗರೆಟ್ ಬಳಕೆದಾರರ ಪರವಾಗಿ ಕಾನೂನು ಹೋರಾಟ ಮುಂದುವರಿಸುತ್ತೇವೆ' ಎಂದು ಗುಡುಗಿದ್ದಾರೆ.

8